1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂ: 2451 /2022 ಡಿಡಬ್ಲ್ಯೂ-1

**ದಿನಾಂಕ: 06-04-2026 ರಂದು ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | ಅಂಬಾಸಾ ನಿರಂಜನ |
| ತಂದೆ ಹೆಸರು | ಪರಶುರಾಮಸಾ |
| ವಯಸ್ಸು | 43 ವರ್ಷ, |
| ಉದ್ಯೋಗ | ಖಾಸಗಿ ಶಾಲೆ ಶಿಕ್ಷಕ |
| ವಾಸಸ್ಥಳ | ಭಾಗ್ಯನಗರ ಕೊಪ್ಪಳ |

**ಮುಖ್ಯ ವಿಚಾರಣೆ:** ಆರೋಪಿ ಪರ ವಕೀಲರಿಂದ:

ಪಿರ್ಯಾದಿ ನನ್ನ ಬಾಲ್ಯ ಸ್ನೇಹಿತ. 2016-17 ರಲ್ಲಿ ನನ್ನ ಖಾತೆಯಲ್ಲಿ ಹಣ ತೋರಿಸಲಿಕ್ಕೆ ಹಣದ ಅವಶ್ಯಕತೆಯಿದ್ದು ಆ ಕಾರಣದಿಂದ ನಾನು ಪಿರ್ಯಾದಿ ಕಡೆಯಿಂದ ರೂ. 2 ಲಕ್ಷ ಹಣ ಹಾಕಿಸಿಕೊಂಡಿರುತ್ತೇನೆ. ಅದರ ಭದ್ರತೆಗಾಗಿ ನಾನುಪಿರ್ಯಾದಿಗೆ ಒಂದು ಚೆಕ್ಕನ್ನು ನೀಡಿದ್ದೆ. ಸದರಿ ಹಣವನ್ನು ನಾನು ನಗದು ರೂಪದಲ್ಲಿ ಪಿರ್ಯಾದಿಗೆ ಮರಳಿಸಿದ್ದುರೂ ಸಹ ಅವರು ನಾನು ಬದ್ರತೆಗಾಗಿ ನೀಡಿದ ಚಕ್ಕನ್ನು ನನಗೆ ನೀಡಿಲ್ಲ ಮತ್ತು ಸದರಿ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ನನ್ನ ವಿರುದ್ದ ಈ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ. ಪಿರ್ಯಾದಿಗೆ ನಾನು ಯಾವುದೇ ಹಣವನ್ನು ಹಿಂತಿರುಗಿಸುವ ಹೊಣೆಗಾರಿಕೆ ಹೊಂದಿರುವುದಿಲ್ಲ. ಆದ್ದರಿಂದ ಈ ಪ್ರಕರಣದಿಂದ ನನ್ನನ್ನು ಖುಲಾಸೆಗೊಳಿಸಬೇಕೆಂದು ನಾನು ಮಾನ್ಯ ನ್ಯಾಯಾಲಯಕ್ಕೆ ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲ**ಃ ಪಿರ್ಯಾದಿ ಪರ ವಕೀಲರು ಕಾಲಾವಕಾಶ ಕೇಳಿದ್ದು ಮುಂದೂಡಲಾಯಿತು.

**(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ**

**1 ನೇ ಹೆ. ಜೆ ಎಂ ಎಫ್ ಸಿ ಕೊಪ್ಪಳ.**